ಹೆಚ್ಚುವರಿ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ

**ಸಿ.ಸಿ. ನಂ. 101/2018**

| | | | |
|---|---|---|---|
| ಹೆಸರು | : | ಅಂಬರೇಶ | ದೋ.ಸಾ. **6** |
| ತಂದೆಯ ಹೆಸರು | : | ತೋಟಯ್ಯ | ಪ್ರಾ.ಸಾ. **4** |
| ವಯಸ್ಸು | : | 27 ವರ್ಷ | ದಿನಾಂಕಃ **13-10-2021** |
| ಉದ್ಯೋಗ | : | ವಿದ್ಯಾಭ್ಯಾಸ | |
| ವಾಸಸ್ಥಳ | : | ರುದನೂರು | |

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ

ಈ ಪ್ರಕರಣದ ಆರೋಪಿತರು ನನಗೆ ಗೊತ್ತಿಲ್ಲ. ಆರೋಪಿತರು ನನಗೆ ಗೊತ್ತಿಲ್ಲ.

ಅದೇ ರೀತಿ ಪ್ರಕರಣದ ಸಾಕ್ಷಿದಾರರಾದ ಚಾಸಾ-1 ರಿಂದ 5 ಮತ್ತು 7 ರಿಂದ 16 ನನಗೆ ಗೊತ್ತಿಲ್ಲ.

ನನಗೆ ಈ ಪ್ರಕರಣದ ಬಗ್ಗೆ ಏನೂ ಗೊತ್ತಿಲ್ಲ. ಈ ಪ್ರಕರಣದ ಆರೋಪಿತರು ಫಿರ್ಯಾಧಿ ಕಾಮಾಕ್ಷಿಗೆ ಕಿರುಕುಳ ಕೊಟ್ಟ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ವಿಚಾರವನ್ನು ನನಗೆ ಯಾರೂ ಹೇಳಿಲ್ಲ ಹಾಗೂ ಅದರ ಬಗ್ಗೆ ನನಗೆ ಖುದ್ದಾಗಿ ಗೊತ್ತಿಲ್ಲ. ಫಿರ್ಯಾದಿ ಆತ್ಮಹತ್ಯೆಗೆ ಪ್ರಯತ್ನಪಟ್ಟಿದ್ದಳು ಎಂಬ ವಿಚಾರ ನನಗೆ ಗೊತ್ತಿಲ್ಲ.

ಪೋಲೀಸರು ಈ ಪ್ರಕಣದ ಸಂಬಂಧ ನನ್ನನ್ನು ವಿಚಾರಣೆ ಮಾಡಿಲ್ಲ. ಪೋಲೀಸರ ಮುಂದೆ ನಾನು ಯಾವುದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ತನಿಖಾಧಿಕಾರಿಯವರ ಮುಂದೆ ಕೊಟ್ಟಿರುವ ಹೇಳಿಕೆಗೆ ಈ ಸಾಕ್ಷಿ ಸಂಪೂರ್ಣ ಪ್ರತಿಕೂಲ ಸಾಕ್ಷ್ಯ ನುಡಿಯುತ್ತಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೊಡುವಂತೆ ಸ.ಸ.ಅ.ರವರು ಅನುಮತಿ ಕೋರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದಃ

ದಿನಾಂಕ 13-10-2017 ರಂದು ಸಾಕ್ಷಿ ಕೊಟ್ಟಿದ್ದಾರೆ ಎನ್ನಲಾದ ಹೇಳಿಕೆಯ ಸಂಪೂರ್ಣ ಭಾಗವನ್ನು ಸ.ಸ.ಅ. ರವರು ಸಾಕ್ಷಿಗೆ ಓದಿ ಹೇಳುತ್ತಾರೆ. ಅದನ್ನು ಕೇಳಿಸಿಕೊಂಡ ಸಾಕ್ಷಿ, ಈಗ ನೀವು ನನಗೆ ಓದಿ ಹೇಳಿದ ರೀತಿಯ ಯಾವುದೇ ಹೇಳಿಕೆಯನ್ನು ನಾನು ಪೋಲಿಸರ ಮುಂದೆ ಕೊಟ್ಟಿಲ್ಲ ಎನ್ನುತ್ತಾರೆ.

ಸಾಕ್ಷಿ ಕೊಟ್ಟಿದ್ದಾರೆ ಎನ್ನಲಾದ ಹೇಳಿಕೆಯನ್ನು ಈಗ ನಿಶಾನೆ ಪಿ-5 ಎಂದು ಗುರುತಿಸಲಾಯಿತು.

ಆರೋಪಿತರು ನನ್ನ ಸಂಬಂಧಿಕರಾಗಿರುವುದರಿಂದ ಈ ಪ್ರಕರಣದಲ್ಲಿ ನಡೆದ ಎಲ್ಲಾ ಘಟನೆಗಳು ನನಗೆ ಗೊತ್ತಿದ್ದರೂ ಸಹ ಮತ್ತು ಪೋಲೀಸರ ಮುಂದೆ ನಿಪಿ-5 ರಂತೆ ಹೇಳಿಕೆ ಕೊಟ್ಟಿದ್ದರೂ ಸಹ ಆರೋಪಿತರಿಗೆ ಸಹಾಯ

ಮಾಡುವ ಸಲುವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ ಎಸ್.ಬಿ.ಕೆ. ವಕೀಲರಿಂದಃ ಇಲ್ಲಾ

ಮರುವಿಚಾರಣೆಃ ಇಲ್ಲಾ

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)
ಓ.ಹೇ.ಕೇ. ಸರಿ ಇದೆ.

ಹೆಚ್ಚುವರಿ ಪ್ರ.ದ.ನ್ಯಾದಂ. ಚಿಂಚೋಳಿ